# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ    Kannada Daily

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.01 | Issue. 146 | Pages. 2 | Date: 12-04-2025, SATURDAY    RNI NO: KARKAN/2024/89601

ಸಂಪುಟ : 01 - ಸಂಚಿಕೆ : 146 - ಪುಟಗಳು : 2 - 12 ಏಪ್ರಿಲ್ 2025 ಶನಿವಾರ    Ph: 8762954248    ದರ : ₹1


# ಪಿಯುಸಿ ಮರು ಪರೀಕ್ಷೆಯತ್ತ ಶಿಕ್ಷಣ ಇಲಾಖೆ ಚಿತ್ತ

## 3345 ವಿದ್ಯಾರ್ಥಿಗಳ ಪಾಸ್ ಮಾಡಿಸುವ ಸವಾಲು | ಉಪನ್ಯಾಸಕರ ರಜೆಗೆ ಕತ್ತರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ 3345 ವಿದ್ಯಾರ್ಥಿಗಳನ್ನು ಪಾಸ್ ಮಾಡಿಸುವ ಸವಾಲು ಶಿಕ್ಷಣ ಇಲಾಖೆಗೆ ಎದುರಾಗಿದ್ದು ಮಕ್ಕಳನ್ನು ಮತ್ತೆ ತಯಾರಿಗೊಳಿಸಲು ಉಪನ್ಯಾಸಕರ ರಜೆ ಕಡಿತಗೊಳಿಸಲಾಗಿದೆ.

ಜಿಲ್ಲೆಯಲ್ಲಿ 180 ಪದವಿಪೂರ್ವ ಕಾಲೇಜುಗಳಿದ್ದು ಅದರಲ್ಲಿ 78 ಸರ್ಕಾರಿ ಕಾಲೇಜುಗಳಿವೆ. ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಮತ್ತೊಂದು ಪರೀಕ್ಷೆಗೆ ಸಿದ್ಧಗೊಳಿಸುವ ಹೊಣೆಯನ್ನು ಆಯಾ ವಿಷಯದ ಉಪನ್ಯಾಸಕರಿಗೆ ನೀಡಲಾಗಿದೆ. ಪ್ರಾಂಶುಪಾಲರು ಈಗಾಗಲೇ ವೇಳಾ ಪಟ್ಟಿಯನ್ನು ಸಿದ್ಧಪಡಿಸಿದ್ದು ತರಗತಿ ಆರಂಭಿಸಲಾಗಿದೆ. ಹೀಗಾಗಿ ಉಪನ್ಯಾಸಕರಿಗೆ ಈ ವರ್ಷ ರಜೆಯ ಮಜಾ ಇಲ್ಲವಾಗಿದೆ.

ಏ. 8ರ ಮಂಗಳವಾರ ಪ್ರಕಟವಾದ 2024-25ನೇ ಸಾಲಿನ ದ್ವಿತೀಯ ಫಲಿತಾಂಶದಲ್ಲಿ ಜಿಲ್ಲೆ ಶೇ. 77.56 ಫಲಿತಾಂಶ ಸಾಧಿಸಿ ರಾಜ್ಯಕ್ಕೆ ಹತ್ತನೇ ಸ್ಥಾನ ಪಡೆದಿದೆ. ಹಿಂದಿನ ವರ್ಷ ಶೇ. 85.83 ಫಲಿತಾಂಶದ ಮೂಲಕ 11ನೇ ಸ್ಥಾನ ಪಡೆದಿತ್ತು.

ಈ ವರ್ಷ ಟಾಪ್ 10 ಸ್ಥಾನ ಗಿಟ್ಟಿಸಿಕೊಂಡಿದೆಯಾದರೂ ಶೇಕಡಾವಾರು ಫಲಿತಾಂಶ ಕುಗ್ಗಿದ ಹಿನ್ನಲೆಯಲ್ಲಿ ಮರು ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ.



### ವಿದ್ಯಾರ್ಥಿನಿಯರ ಹಿಂದೇಟು

ಮರು ಪರೀಕ್ಷೆ ತಯಾರಿಗೆ ಬಾಲಕರು ಬರುತ್ತಿದ್ದಾರೆಯಾದರೂ ಬಾಲಕಿಯರು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ. ನಿತ್ಯ ತರಗತಿಗೆ ಬರುವುದಾದರೆ ಗೆಳತಿಯರ ಜೊತೆಗೆ ಹೇಗೋ ಹೋಗುತ್ತಾರೆ. ಆದರೆ ಈಗ ಪರೀಕ್ಷೆಯಲ್ಲಿ ಫೇಲ್ ಆಗಿದ್ದೇನೆಂಬ ಆತಂಕ ಹಾಗು ಒಬ್ಬೊಬ್ಬರೇ ಬರಲು ಹಿಂಜರಿಯುತ್ತಿದ್ದಾರೆ. ಪೋಷಕರು ಸಹ ಮರು ಪರೀಕ್ಷೆ ಬಗ್ಗೆ ಅಸಡ್ಡೆ ತೋರುತ್ತಿರುವುದು ಉಪನ್ಯಾಸಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

> ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ಸಭೆ ನಡೆಸಿದ್ದು ಪಾಸಿಂಗ್ ಪ್ಯಾಕೇಜ್ ಅಡಿ ಪಾಠ ಮಾಡಲಾಗುತ್ತಿದೆ. ಆ ದಿನದ ವರದಿಯನ್ನು ಉಪನ್ಯಾಸಕರು ವಾಟ್ಸ್ಆ್ಯಪ್ ಗ್ರೂಪ್‌ಗಳಲ್ಲಿ ಶೇರ್ ಮಾಡುತ್ತಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಪಾಸ್ ಮಾಡಿಸುವುದೇ ನಮ್ಮ ಗುರಿ.
>
> **- ಗಂಗಾಧರ್, ಉಪ ನಿರ್ದೇಶಕ ಪದವಿಪೂರ್ವ ಶಿಕ್ಷಣ ಇಲಾಖೆ**

### ಉಪನ್ಯಾಸಕರ ಆಕ್ಷೇಪ

ಮರು ಪರೀಕ್ಷೆಗಾಗಿ ರಜೆ ಕಡಿತಗೊಳಿಸಿದ್ದಕ್ಕೆ ಕೆಲ ಉಪನ್ಯಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪರೀಕ್ಷೆ ಮೌಲ್ಯಮಾಪನ ಕಾರಣ ಈಗಾಗಲೇ ರಜೆ ಕಡಿತವಾಗಿದ್ದು, ಮತ್ತೆ ರಜೆ ಕಡಿತಗೊಳಿಸಿದರೆ ಸಮಸ್ಯೆಯಾಗುತ್ತದೆ.

ಕನಿಷ್ಠ ಪಕ್ಷ ಇಎಲ್ ನೀಡಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಪದವಿ ಪೂರ್ವ ಉಪನ್ಯಾಸಕರ ಸಂಘ ಸಹ ಈ ಕುರಿತು ಸರ್ಕಾರದೊಂದಿಗೆ ಚರ್ಚೆಯಲ್ಲಿ ತೊಡಗಿದೆ.

### ಬಂಕ್ ಹೊಡೆದವರೇ ಜಾಸ್ತಿ ಫೇಲ್!

14,909 ವಿದ್ಯಾರ್ಥಿಗಳ ಪೈಕಿ ಅನುತ್ತೀರ್ಣರಾದ 3345 ವಿದ್ಯಾರ್ಥಿಗಳು ಮರು ಪರೀಕ್ಷೆ ಬರೆಯಬೇಕಿದೆ. ಏ. 24 ರಿಂದ ಮೇ 8ರ ವರೆಗೆ ಪರೀಕ್ಷೆ ನಡೆಯುವುದರಿಂದ ಫೇಲಾಗಿರುವ ಎಲ್ಲರಿಗೂ ಪರೀಕ್ಷೆ ತೆಗೆದುಕೊಳ್ಳುವಂತೆ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಮನವೊಲಿಸುತ್ತಿದ್ದಾರೆ. ಕಲಾ ವಿಭಾಗದಲ್ಲಿ 1162, ವಾಣಿಜ್ಯ 1144 ಹಾಗೂ ವಿಜ್ಞಾನ ವಿಭಾಗದಲ್ಲಿ 1039 ವಿದ್ಯಾರ್ಥಿಗಳು ಮರು ಪರೀಕ್ಷೆ ಬರೆಯಬೇಕಿದೆ.

ವಿಷಯವಾರು ಅನುತ್ತೀರ್ಣರಾದ ಮಕ್ಕಳಿಗೆ ಪಠ್ಯ ಬೋಧನೆ ಮಾಡುತ್ತಿರುವ ಉಪನ್ಯಾಸಕರು ಬೆಳಿಗ್ಗೆ ಪಾಠ ಮಾಡಿದರೆ ಮಧ್ಯಾಹ್ನ ಅದೇ ವಿಷಯ ಕುರಿತು ಕಿರು ಪರೀಕ್ಷೆಯನ್ನು ಪ್ರತಿದಿನ ನಡೆಸುತ್ತಿದ್ದಾರೆ.

ಮರು ಪರೀಕ್ಷೆಗೆ ಕೇವಲ 10 ದಿನಗಳು ಮಾತ್ರ ಬಾಕಿ ಇರುವುದರಿಂದ ಪಾಸಿಂಗ್ ಪ್ಯಾಕೇಜ್ ಅನ್ನು ಜಾರಿಗೊಳಿಸಲಾಗಿದೆ. ವಿದ್ಯಾರ್ಥಿಗಳನ್ನು ಅತ್ಯಧಿಕ ಅಂಕ ಗಳಿಸಲು ಸಿದ್ಧಗೊಳಿಸದೆ ಕನಿಷ್ಠ ಪಾಸಾಗುವ ಮಟ್ಟಕ್ಕಾದರೂ ಸಿದ್ಧರನ್ನಾಗಿಸಬೇಕು ಎನ್ನುವುದು ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳ ಗುರಿಯಾಗಿದೆ.

ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಬಹುತೇಕ ವಿದ್ಯಾರ್ಥಿಗಳು ಕಾಲೇಜಿಗೆ ಸುದೀರ್ಘ ರಜೆ ಹಾಕಿರುವವರೇ ಆಗಿದ್ದಾರೆ.

ಕಾಲೇಜಿಗೆ ಪ್ರವೇಶ ಪಡೆದು ನಂತರ ಆರೋಗ್ಯ, ವಲಸೆ, ಬಡತನ, ಸಾರಿಗೆ ಹಾಗೂ ಕೌಟುಂಬಿಕ ಸಮಸ್ಯೆಗಳಿಂದ ಕಾಲೇಜಿಗೆ ಬಾರದೆ ಇರುವ ವಿದ್ಯಾರ್ಥಿಗಳೇ ಅನುತ್ತೀರ್ಣರಾಗಿದ್ದಾರೆ.

ಈಗ ಅವರನ್ನು ಹುಡುಕಿ ಮನವೊಲಿಸುವುದು ಪ್ರಾಂಶುಪಾಲರಿಗೆ ತಲೆನೋವಿನ ಕೆಲಸವಾಗಿದೆ.

> ಎಲ್ಲಾ ಉಪನ್ಯಾಸಕರ ಸಭೆ ನಡೆಸಿ, ವಿಷಯವಾರು ಟೈಮ್ ಟೇಬಲ್ ಹಾಕಿಕೊಳ್ಳಲಾಗಿದೆ. ಶಿಕ್ಷಣ ಇಲಾಖೆಯ ಆದೇಶವಾಗಿರುವುದರಿಂದ ಉಪನ್ಯಾಸಕರು ಸಹ ನಿರ್ಲಕ್ಷ್ಯ ತೋರದೆ ತರಗತಿಗೆ ಹಾಜರಾಗುತ್ತಿದ್ದಾರೆ.
>
> **- ಆಶಾಕುಮಾರಿ,**
> **ಹಳೇಬೀಡು ಸರ್ಕಾರಿ ಪಪೂ ಕಾಲೇಜು ಪ್ರಾಂಶುಪಾಲೆ**

# ಉಡುಸಲಮ್ಮ ಜಾತ್ರೆಗೆ ವೈಭವದ ಚಾಲನೆ



ಚನ್ನರಾಯಪಟ್ಟಣ: ತಾಲ್ಲೂಕಿನ ಮೂಕೀಕೆರೆ ಗ್ರಾಮದೇವತೆ ಶ್ರೀ ಉಡುಸಲಮ್ಮ ಮತ್ತು ಶ್ರೀ ದೊಡ್ಡಮ್ಮ ದೇವಿಯ ಹಬ್ಬ ಹಾಗೂ ಜಾತ್ರಾ ಮಹೋತ್ಸವಕ್ಕೆ ವೈಭವದ ಚಾಲನೆ ದೊರೆಯಿತು.

ಮುಂಜಾನೆ ದೇಗುಲಕ್ಕೆ ಹಸಿರು ಚಪ್ಪರ ಹಾಕಲಾಗಿದ್ದು ಬಾಳೆಕಂದು ಹಾಗೂ ಮಾವಿನ ತೋರಣ ಕಟ್ಟಿ ಸಿಂಗರಿಸಲಾಯಿತು. ಊರ ಹೆಬ್ಬಾಗಿಲಿನಿಂದ ಹೊರ ವಲಯದ ತೋಪಿನಲ್ಲಿರುವ ದೇವಿಯ ಸನ್ನಿಧಿ ವರೆಗೆ ರಸ್ತೆ ಮತ್ತು ಬೀದಿ ಇಕ್ಕೆಲೆಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಬೆಳಿಗ್ಗೆ ದೇವಿಯ ಮೆರೆ ವಿಗ್ರಹವನ್ನು ತುರುವೇಕೆರೆ ತಾಲ್ಲೂಕು ಮಲ್ಲಾಘಟ್ಟ ಕೆರೆಗೆ ಕರೆದೊಯ್ದು ಗಂಗಾಸ್ನಾನ ಮುಗಿಸಿಕೊಂಡು ಸಂಜೆ ಊರಿಗೆ ಕರೆತರಲಾಯಿತು. ದೇವಿಯು ಹೆಬ್ಬಾಗಿಲಿಗೆ ಆಗಮಿಸುತ್ತಿದ್ದಂತೆಯೇ ಗ್ರಾಮಸ್ಥರು ಪುಷ್ಪಾರ್ಚನೆಯೊಂದಿಗೆ ಸ್ವಾಗತಿಸಿದರು.

ದೇವಿಯನ್ನು ಪ್ರಮುಖ ರಸ್ತೆ ಹಾಗೂ ರಾಜಬೀದಿಯಲ್ಲಿ ಮಂಗಳವಾದದೊಂದಿಗೆ ಅಡ್ಡಪಲ್ಲಕ್ಕಿ ಉತ್ಸವದ ಮೂಲಕ ದೇಗುಲಕ್ಕೆ ಕರೆತರಲಾಯಿತು. ಗ್ರಾಮದ ಶಾಲಾ ಮಕ್ಕಳು ಈಶ್ವರ, ವಿನಾಯಕ, ವಿಷ್ಣು, ಲಕ್ಷ್ಮೀ, ಸರಸ್ವತಿ, ಶಾರದೆ ಮತ್ತು ವಿವಿಧ ದೇವತೆಗಳ ಹಾಗೂ ವೀರ ಸಂಗೊಳ್ಳಿ ರಾಯಣ್ಣ ಸೇರಿದಂತೆ ವಿವಿಧ ಸ್ವಾತಂತ್ರ್ಯ ಹೋರಾಟಗಾರರ ವೇಷ ಧರಿಸಿ ಉತ್ಸವದಲ್ಲಿ ಸಾಗಿದ್ದು ಗಮನ ಸೆಳೆಯಿತು.

ಕೆಂಚರಾಯ ಹಾಗೂ ಭೂತರಾಯ ಸೋಮಗಳ ಕುಣಿತ ಆಕರ್ಷಣೀಯವಾಗಿತ್ತು. ಹೆಣ್ಣು ಮಕ್ಕಳು ಆರತಿ ಬೆಳಗಿ ದೇವಿಗೆ ದೃಷ್ಟಿ ತೆಗೆದರು. ಶ್ರೀ ಉಡುಸಲಮ್ಮ ದೇವಿ ಸೇವಾ ಸಮಿತಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಪಾಲ್ಗೊಂಡಿದ್ದರು.

**ತೆಪ್ಪೋತ್ಸವ, ಪಂದ್ಯಾವಳಿ:** ಶನಿವಾರ ಸಂಜೆ 7 ಗಂಟೆಗೆ ಸನ್ನಿಧಿಯ ಆವರಣದಲ್ಲಿರುವ ಕಲ್ಯಾಣಿಯಲ್ಲಿ ದೇವಿಯ ತೆಪ್ಪೋತ್ಸವ ಜರುಗಲಿದ್ದು ನಂತರ 8 ಗಂಟೆಯಿಂದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ನಡೆಯಲಿದೆ.

# ಇಂದಿನಿಂದ 2 ದಿನಗಳ ಕ್ರಿಕೆಟ್ ಪಂದ್ಯಾವಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಏ. 12 ಮತ್ತು 13 ರಂದು ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಹೆಚ್. ವೇಣುಕುಮಾರ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ನಗರದ ಸರ್ಕಾರಿ ಕಲಾ, ವಿಜ್ಞಾನ ಕಾಲೇಜು ಹಾಗೂ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಮೈದಾನದಲ್ಲಿ ಎರಡು ದಿನಗಳ ಕಾಲ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಏ. 12ರ ಬೆಳಿಗ್ಗೆ 9 ಗಂಟೆಗೆ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ವಿಧಾನಸಭೆ ಸಭಾಪತಿ ಯು.ಟಿ. ಖಾದರ್ ಅವರ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ. ಎನ್. ರಾಜಣ್ಣ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ ಎಂದರು.

ಸಂಸದ ಶ್ರೇಯಸ್ ಪಟೇಲ್ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಆಶಯ ನುಡಿಗಳನ್ನಾಡಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಟಿ.ವಿ. ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಬಿ. ಮದನ ಗೌಡ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಸಿ.ಎನ್. ಬಾಲಕೃಷ್ಣ, ಹೆಚ್.ಪಿ. ಸ್ವರೂಪ್, ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಅನೇಕರು ಪಾಲ್ಗೊಳ್ಳಲಿದ್ದಾರೆ.

# ನಾಳೆ ಮತದಾನ: ಭಾನು ಪ್ರಕಾಶ್ ಬೆಂಬಲಿಸಲು ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಏ. 13 ರಂದು ಚುನಾವಣೆ ನಡೆಯಲಿದ್ದು ಡಾ. ಬಿ. ಭಾನುಪ್ರಕಾಶ್ ಶರ್ಮಾ ಅವರಿಗೆ ಜಿಲ್ಲೆಯ ಮತದಾರರು ಮತ ನೀಡಬೇಕು ಎಂದು ಮಹಾಸಭಾ ವಲಯ ಉಪಾಧ್ಯಕ್ಷ ಟಿ.ಹೆಚ್. ಚಂದ್ರಶೇಖರ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಅಶೋಕ್ ಹಾರನಹಳ್ಳಿ ಬೆಂಬಲಿತ ಅಭ್ಯರ್ಥಿಯಾಗಿ ಡಾ. ಬಿ. ಭಾನು ಪ್ರಕಾಶ್ ಶರ್ಮಾ ಸ್ಪರ್ಧಿಸಿದ್ದಾರೆ. ಬ್ರಾಹ್ಮಣ್ಯ, ಬ್ರಾಹ್ಮಣರ ಹಾಗೂ ಸನಾತನ ಧರ್ಮದ ರಕ್ಷಣೆ, ಧರ್ಮ ಜಾಗೃತಿ ಶಿಬಿರಗಳನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳುವುದು, ಮಹಿಳೆಯರ ಸಂಘಟನೆಗಾಗಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಭಜನಾ ಮಂಡಲಿ, ಸಹಸ್ರನಾಮ ಮಂಡಲಿ ಮುಂತಾದ ಸಂಘಗಳನ್ನು ಸ್ಥಾಪಿಸಿ ಪ್ರೋತ್ಸಾಹಿಸುವುದು, ಧಾರ್ಮಿಕ ಶಿಕ್ಷಣ ತರಬೇತಿ ಶಿಬಿರಗಳನ್ನು ಸಂಯೋಜಿಸುವ ಯೋಜನೆಗಳನ್ನು ಡಾ. ಭಾನು ಪ್ರಕಾಶ್ ಹಾಕಿಕೊಂಡಿದ್ದಾರೆ ಎಂದು ತಿಳಿಸಿದರು.




ಪಾರಂಪರಿಕ ಕಲಾ ಪ್ರಕಾರಗಳಾದ ಭರತನಾಟ್ಯ, ಸಂಗೀತ, ಸಂಗೀತ ವಾದ್ಯಗಳ ಕಲಿಕೆಗಾಗಿ ಹಾಗೂ ಅವರಿಗೆ ಸೂಕ್ತ ವೇದಿಕೆಗಳಲ್ಲಿ ಪ್ರದರ್ಶನ ನೀಡಲು ಅವಕಾಶ, ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಉತ್ತೇಜನ, ಆರೋಗ್ಯ ಜಾಗೃತಿ, ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಕೊಡಿಸುವುದು, ಕ್ರೀಡಾ ತರಬೇತಿಗೆ ಪ್ರೋತ್ಸಾಹ, ಸಂಗಮ, ಕುಟೀರ ಯೋಜನೆಯಡಿ ಗೃಹಗಳ ನಿರ್ಮಾಣ, ವಿಪ್ರರ ವಿವಿಧ ಕ್ಷೇತ್ರಗಳ ಸಾಧಕ ಸಂಸ್ಥೆಗಳೊಂದಿಗೆ ಬಾಂಧವ್ಯ ಏರ್ಪಡಿಸಿ ಉತ್ಪಾದಕ ಮತ್ತು ಗ್ರಾಹಕರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು. ಡಾ.ಭಾನುಪ್ರಕಾಶ್ ಅವರು ಮಹಾಸಭೆಯಲ್ಲಿ ಕಳೆದ 30 ವರ್ಷಗಳಿಂದ ಸದಸ್ಯರಾಗಿ, ವಿವಿಧ ಹಂತಗಳಲ್ಲಿ ಪದಾಧಿಕಾರಿಯಾಗಿ, ಮೂರು ಬಾರಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಈ ಮೂಲಕ ಯಶಸ್ವಿ ಸಂಘಟಕರೆನಿಸಿದ್ದು, ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ವಕೀಲ ಎನ್.ಎಸ್. ಗೋಪಾಲ್, ವೇಣುಗೋಪಾಲ್, ತಿಲಕ್, ರಕ್ಷಿತ್ ಇದ್ದರು.

# ಟ್ರ್ಯಾಕ್ಟರ್ ಮಗುಚಿ ರೈತ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ರಾಮನಾಥಪುರ ಹೋಬಳಿ ಬೆಟ್ಟಸೋಗೆ ಗ್ರಾಮದಲ್ಲಿ ಉಳುಮೆ ಮಾಡುತ್ತಿದ್ದಾಗ ಟ್ರ್ಯಾಕ್ಟರ್ ಮಗುಚಿ ಚಾಲಕ ಶುಕ್ರವಾರ ಮೃತಪಟ್ಟಿದ್ದಾನೆ.

ಗ್ರಾಮದ ಸುನಿಲ್ (29) ಮೃತ ರೈತ. ತಮ್ಮ ಜಮೀನಿನಲ್ಲಿ ಟ್ರ್ಯಾಕ್ಟರ್‌ನಿಂದ ಕೆಲಸ ಮಾಡುತ್ತಿದ್ದಾಗ ನಿಯಂತ್ರಣ ತಪ್ಪಿ ವಾಹನ ಮಗುಚಿ ಬಿದ್ದಿದೆ. ಮೃತರು ಪತ್ನಿ, ಒಂದು ಗಂಡು ಹಾಗೂ ಪುತ್ರಿಯನ್ನು ಅಗಲಿದ್ದಾನೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನೂಕಾಟದಲ್ಲಿ ಚಿನ್ನಾಭರಣ ಕಳವು

ಅರಸೀಕೆರೆ: ನಗರದ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ನೂಕಾಟದಲ್ಲಿ ಮಹಿಳೆಯೊಬ್ಬರ ಬ್ಯಾಗ್‌ನಲ್ಲಿದ್ದ 75 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಲಾಗಿದೆ.

ಬೆಂಗಳೂರಿನ ಅತ್ತಿಗುಪ್ಪೆ ನಿವಾಸಿ ಜಯಲಕ್ಷ್ಮಿ ಚಿನ್ನಾಭರಣ ಕಳೆದುಕೊಂಡವರು. ಸಂಬಂಧಿಕರ ಮದುವೆ ಸಮಾರಂಭದಲ್ಲಿ ಧರಿಸಲು ಪಕ್ಕದ ಮನೆಯ ಸ್ನೇಹಿತರಿಂದ ಚಿನ್ನಾಭರಣ ಪಡೆದಿದ್ದರು. ನಗರದ ವೀರಶೈವ ಸಮುದಾಯ ಭವನದಲ್ಲಿ ಮದುವೆ ಮುಗಿಸಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿ ನಿಗದಿಯಾಗಿದ್ದ ಮತ್ತೊಂದು ಮದುವೆಗೆ ತೆರಳಲು ಬಸ್ ಹತ್ತಲು ಬಂದಿದ್ದರು. ಶಿವಮೊಗ್ಗ ಮಾರ್ಗದ ಬಸ್ ಹತ್ತುತ್ತಿದ್ದಾಗ ನೂಕಾಟದಲ್ಲಿ ಗಮನಕ್ಕೆ ಬಾರದಂತೆ ಬ್ಯಾಗ್‌ನಲ್ಲಿದ್ದ 68 ಗ್ರಾಂ ತೂಕದ ಚಿನ್ನದ ಸರ, 5 ಗ್ರಾಂ ತೂಕದ ಬಿಳಿಕಲ್ಲಿನ ಒಂದು ಜೊತೆ ಚಿನ್ನದ ಓಲೆ, 2 ಗ್ರಾಂ ತೂಕದ ಚಿನ್ನದ ಉಂಗುರ ಕದ್ದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.







ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿ

12-04-2025ನೇ ಶನಿವಾರ    ಉದ್ಘಾಟನಾ ಸಮಾರಂಭ    ಬೆಳಿಗ್ಗೆ 09-ಗಂಟೆಗೆ

ಶುಭ ಆಶೀರ್ವಾದ : ಪ್ಯೂಜ್ಯ ಶ್ರೀ ಶ್ರೀ ಶಂಭುನಾಥ ಮಹಾಸ್ವಾಮೀಜಿ, ಇವರ ಶುಭ ಆಶೀರ್ವಾದದೊಂದಿಗೆ
ಶ್ರೀ ಹೆಚ್.ಡಿ. ದೇವೇಗೌಡರು ಮಾಜಿ ಪ್ರಧಾನಿಗಳು
ಹಾಗೂ ಹಾಲಿ ರಾಜ್ಯಸಭಾ ಸದಸ್ಯರು, ಭಾರತ ಸರ್ಕಾರ ಇವರ ಶುಭ ಹಾರೈಕೆಗಳೊಂದಿಗೆ

| | | |
|---|---|---|
| ಉಪಸ್ಥಿತಿ | : | ಶ್ರೀ ಯು.ಟಿ. ಖಾದರ್<br>ಗೌರವಾನ್ವಿತ ಸಭಾಪತಿಗಳು, ವಿಧಾನಸಭೆ ಬೆಂಗಳೂರು |
| ಕ್ರೀಡಾಕೂಟ ಉದ್ಘಾಟನೆ | : | ಶ್ರೀ ಕೆ.ಎನ್. ರಾಜಣ್ಣ<br>ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವರು, ಕರ್ನಾಟಕ ಸರ್ಕಾರ |
| ಕ್ರೀಡಾಕೂಟಕ್ಕೆ ಚಾಲನೆ | : | ಶ್ರೀ ಶ್ರೇಯಸ್ ಪಟೇಲ್, ಮಾನ್ಯ ಸಂಸದರು ಹಾಸನ ಲೋಕಸಭಾ ಕ್ಷೇತ್ರ |
| ಆಶಯ ನುಡಿ | : | ಕೆ.ವಿ. ಪ್ರಭಾಕರ್, ಮಾನ್ಯ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು |
| ಅಧ್ಯಕ್ಷತೆ | : | ಶ್ರೀ ಟಿ.ವಿ. ಶಿವಾನಂದ ತಗಡೂರು<br>ರಾಜ್ಯಾಧ್ಯಕ್ಷರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರು |
| ಪ್ರಾಸ್ತಾವಿಕ ನುಡಿ | : | ಶ್ರೀ ಹೆಚ್.ಬಿ. ಮದನಗೌಡ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು<br>ಮತ್ತು ಕಾರ್ಯದರ್ಶಿಗಳು ಭಾರತೀಯ ಪತ್ರಕರ್ತರ ಒಕ್ಕೂಟ ನವದೆಹಲಿ |
| ಪ್ರೇರಣಾ ನುಡಿ | : | ಶ್ರೀ ಕೆ.ಹೆಚ್. ವೇಣುಕುಮಾರ್,<br>ಅಧ್ಯಕ್ಷರು, ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಹಾಸನ |
| ವಿಶೇಷ ಆಹ್ವಾನಿತರು | : | ಶ್ರೀ ಕೆ.ಎಂ. ಶಿವಲಿಂಗೇಗೌಡ, ಅಧ್ಯಕ್ಷರು ಕರ್ನಾಟಕ ಗೃಹ ಮಂಡಳಿ<br>ಹಾಗೂ ಶಾಸಕರು ಅರಸೀಕೆರೆ ವಿಧಾನಸಭಾ ಕ್ಷೇತ್ರ |
| | : | ಶ್ರೀ ಎ. ಮಂಜು,<br>ಮಾಜಿ ಸಚಿವರು ಹಾಲಿ ಶಾಸಕರು ಅರಕಲಗೂಡು ವಿಧಾನಸಭಾ ಕ್ಷೇತ್ರ |
| | : | ಶ್ರೀ ಸಿ.ಎನ್. ಬಾಲಕೃಷ್ಣ,<br>ಶಾಸಕರು ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರ |
| | : | ಶ್ರೀ ಎಚ್.ಪಿ.ಸ್ವರೂಪ್ ಪ್ರಕಾಶ್,<br>ಶಾಸಕರು, ಹಾಸನ ವಿಧಾನಸಭಾ ಕ್ಷೇತ್ರ |
| | : | ಶ್ರೀ ಚಂದ್ರೇಗೌಡ, ಅಧ್ಯಕ್ಷರು, ನಗರಸಭೆ ಹಾಸನ |
| | : | ಶ್ರೀ ಎಂ.ಎ. ಗೋಪಾಲಸ್ವಾಮಿ, ವಿಧಾನಪರಿಷತ್ ಮಾಜಿ ಸದಸ್ಯರು<br>ಹಾಗೂ ಕೆಡಿಪಿ ಸದಸ್ಯರು ಜಿ.ಪಂ. ಹಾಸನ |
| | : | ಶ್ರೀಮತಿ ಸಿ.ಸತ್ಯಭಾಮ , ಜಿಲ್ಲಾಧಿಕಾರಿ ಹಾಸನ |
| | : | ಕುಮಾರಿ ಮಹಮ್ಮದ್ ಸುಜೀತಾ,<br>ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಸನ |
| | : | ಶ್ರೀಮತಿ ಪೂರ್ಣಿಮಾ ಬಿ.ಆರ್.<br>ಸಿ.ಇ.ಓ, ಜಿಲ್ಲಾ ಪಂಚಾಯತ್ ಹಾಸನ |
| | : | ಶ್ರೀ ಸೌರಭ್‌ಕುಮಾರ್. ಡಿ.ಎಫ್.ಓ. ಅರಣ್ಯ ಇಲಾಖೆ, ಹಾಸನ |
| | : | ಶ್ರೀ ಕೆ.ಎಂ. ರಮೇಶ್, ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರಸಭೆ ಹಾಸನ |
| | : | ಶ್ರೀ ಬಿ.ವಿ. ಮಲ್ಲಿಕಾರ್ಜುನಯ್ಯ, ಅಧ್ಯಕ್ಷರು ಐಎಫ್‌ಡಬ್ಲ್ಯುಜೆ ನವದೆಹಲಿ |
| | : | ಶ್ರೀ ಮಂಜುನಾಥ ದತ್ತ, ಸಂಪಾದಕರು ಜನತಾ ಮಾಧ್ಯಮ ದಿನಪತ್ರಿಕೆ |

SUJALA EDUCATION TRUST (R)

# SUJALA PU COLLEGE

APOORVA HOTEL ROAD, NORTHERN EXTENSTION, HASSAN

## II PUC ANNUAL EXAMINATION RESULT-2025

### SCIENCE TOPPER

**HITASHREE H.G** — GRAND TOTAL 590
K-100 E-95 P-98
C-98 M-99 CS-100
Reg No : 20259550148

| Name | Grand Total | Marks | Reg no |
|---|---|---|---|
| RAMYA S.K | 582 | K-96 E-95 P-96 C-97 M-99 B-99 | 20259550351 |
| KANCHANA M.P | 570 | K-99 E-94 P-90 C-91 M-98 B-98 | 20259550170 |
| NAGAMANI | 563 | K-97 E-92 P-90 C-93 M-97 B-94 | 20259550253 |
| KRISHNAVENI A.G | 562 | K-98 E-91 P-86 C-94 M-94 B-99 | 20259550193 |
| SRUSHTI H.S | 560 | K-97 E-88 P-94 C-86 M-97 CS-98 | 20259550434 |
| KUSUMA M | 560 | K-97 E-90 P-89 C-93 M-98 B-93 | 20259550200 |
| THRIVENI N.A | 559 | K-99 E-90 P-85 C-93 M-97 B-95 | 20259550461 |
| D. RAKSHITHA | 555 | K-99 E-88 P-89 C-94 M-93 B-92 | 20259550087 |
| VINANTHI B.R | 555 | K-98 E-90 P-85 C-92 M-98 B-92 | 20259550481 |
| SONIKA B.K | 555 | K-99 E-90 P-89 C-87 M-97 B-93 | 20259550427 |
| PRKSHA | 555 | K-99 E-91 P-89 C-88 M-96 B-92 | 20259550326 |
| MANASA | 554 | K-94 E-90 P-89 C-92 M-94 B-95 | 20259550218 |
| HARSHITHA K.R | 553 | K-97 E-88 P-91 C-90 M-96 B-91 | 20259550138 |
| MALLIKARJUN B | 550 | H-90 E-83 P-93 C-91 M-99 CS-94 | 20259550217 |
| CHIRANTHAN D.C | 545 | S-98 E-90 P-94 C-89 M-82 CS-92 | 20259550086 |
| SINCHANA H.M | 545 | K-98 E-94 P-85 C-86 M-87 B-95 | 20259550415 |
| PUNYA K.G | 543 | K-99 E-87 P-84 C-91 M-92 B-90 | 20259550331 |
| MARUTHI B.V | 540 | K-95 E-85 P-89 C-90 M-93 B-88 | 20259550228 |
| ANKITHA H.R | 539 | K-99 E-77 P-85 C-87 M-99 CS-92 | 20259550046 |
| SMARAN BHOOPALAM | 539 | S-94 E-87 P-90 C-95 M-89 CS-84 | 20259550419 |
| SPOORTHI H.S | 539 | K-97 E-86 P-91 C-73 M-96 CS-96 | 20259550432 |
| THILAK S | 538 | K-90 E-86 P-83 C-87 M-93 CS-99 | 20259550462 |
| SHASHANTH | 537 | K-90 E-83 P-86 C-90 M-92 CS-96 | 20259550398 |
| PALLAVI | 537 | K-96 E-86 P-88 C-84 M-93 B-90 | 20259550282 |
| DEEKSHA B.J | 534 | K-99 E-90 P-87 C-81 M-89 B-88 | 20259550096 |
| PREETHI N.N | 534 | K-99 E-91 P-83 C-84 M-89 B-89 | 20259550234 |
| KEERTHANA | 534 | K-99 E-93 P-81 C-99 M-81 CS-91 | 20259550183 |
| JEEVITHA | 532 | K-95 E-93 P-83 C-76 M-91 CS-94 | 20259550167 |
| VINDYA H.R | 531 | K-96 E-90 P-85 C-86 M-90 B-84 | 20259550485 |
| KUSUMA | 528 | K-96 E-79 P-86 C-84 M-93 B-90 | 20259550199 |
| SUSHANTH M.P | 525 | K-90 E-76 P-90 C-83 M-85 CS-91 | 20259550443 |
| SURYA | 524 | K-90 E-92 P-86 C-83 M-88 CS-95 | 20259550442 |
| REENA C.K | 521 | K-99 E-81 P-86 C-75 M-96 B-84 | 20259550359 |
| THRISHA R.T | 521 | K-99 E-90 P-82 C-82 M-81 B-87 | 20259550459 |
| RAKSHITHA | 518 | K-98 E-74 P-87 C-84 M-93 B-82 | 20259550346 |
| BHUMIKA | 518 | K-91 E-84 P-87 C-79 M-97 B-80 | 20259550061 |
| AISHWARYA K.S | 517 | K-96 E-91 P-83 C-72 M-87 B-88 | 20259550028 |
| POOJA | 515 | K-98 E-78 P-77 C-81 M-96 B-85 | 20259550292 |
| NIVEDITHA P.D | 515 | K-94 E-85 P-83 C-83 M-93 B-77 | 20259550278 |
| SUPRITH N | 513 | K-93 E-85 P-80 C-80 M-92 B-83 | 20259550440 |
| SINCHANA D.G | 513 | K-99 E-84 P-85 C-81 M-69 B-95 | 20259550414 |
| MITHUN D.C | 513 | K-95 E-89 P-77 C-87 M-86 B-79 | 20259550237 |
| NISCHITHA | 510 | K-96 E-76 P-80 C-80 M-86 CS-92 | 20259550271 |
| YOGANARASIMHA B.N | 509 | K-91 E-81 P-88 C-73 M-91 B-85 | 20259550503 |
| RACHANA | 507 | K-97 E-87 P-74 C-76 M-85 B-88 | 20259550337 |
| ROHAN H.N | 506 | K-95 E-68 P-88 C-82 M-84 B-89 | 20259550365 |
| MONALISA RAJ T.D | 505 | K-88 E-84 P-82 C-76 M-95 B-80 | 20259550246 |
| SANJAY K.R | 504 | K-87 E-71 P-90 C-82 M-94 B-80 | 20259550388 |
| SUSHMA H.N | 504 | K-96 E-75 P-86 C-75 M-86 B-86 | 20259550444 |
| ANIL GOWDA G.S | 503 | K-99 E-78 P-81 C-84 M-80 B-81 | 20259550045 |
| AGAM JAIN H.S | 502 | S-97 E-85 P-77 C-76 M-93 CS-74 | 20259550024 |
| PALLAVI | 500 | K-98 E-85 P-86 C-80 M-71 B-80 | 20259550281 |

### COMMERCE TOPPER

**FARHA SULTHANA** — GRAND TOTAL 561
H-95 E-90 EC-94
BS-95 AC-97 CS-90
Reg no : 20259550119

| Name | Grand Total | Marks | Reg no |
|---|---|---|---|
| ADARSHA K.C | 550 | K-96 E-77 EC-92 BS-96 AC-96 CS-93 | 20259550236 |
| PRIYANKA D.L | 534 | K-98 E-81 EC-85 BS-89 AC-94 CS-87 | 20259550328 |
| MISBA ANJUM B.S | 525 | H-89 E-83 EC-84 BS-99 AC-95 CS-75 | 20259550235 |
| SAGAR B | 521 | K-98 E-75 EC-91 BS-85 AC-86 CS-86 | 20259550377 |
| SANIKA H.K | 512 | K-96 E-77 EC-86 BS-80 AC-97 CS-76 | 20259550385 |

## JEE (MAIN) - 2025 SESSION-1

| Name | Percentile | Roll no | Scores |
|---|---|---|---|
| MALLIKARJUN B | 97.6734 | KK14106456 | P : 97.0759 \| C: 96.4538 M : 96.7006 |
| AGAM JAIN H.S | 95.8052 | KK23100708 | P : 95.0697 \| C: 92.4137 M : 96.2483 |
| SMARAN BHOOPALAM | 90.6602 | KK09101016 | P : 93.3245 \| C: 93.0197 |
| CHIRANTH D K | 93.0471 | KK14107185 | P : 92.2112 \| C: 98.1761 |

## Medical Achievers 2024

- Mahalakshmi NEET - 570
- Deepthi NEET - 564
- Ramitha NEET - 480
- Aishwarya NEET - 464

## Admission Open For 2025-26

Dr.Lokesh S M.Sc.M.Phil.,Ph.D
President- 9844359215

Swetha Lokesh, M.Sc., B.Ed
Secretary- 9844 244869

ಅತ್ಯುನ್ನತ ಶ್ರೇಣಿ : 61 | ಪ್ರಥಮ ಶ್ರೇಣಿ : 96 | ದ್ವಿತೀಯ ಶ್ರೇಣಿ : 27

Best Wishes From Management,
Principal, Staff & Students

**Contact : 98442 44869 | 98443 59215 | 63606 |85198**

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248